ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	192 (163)
ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	14-12-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಬೀದರ್ ನಗರಸಭೆಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿರುವ ಹಾಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಅದರಲ್ಲಿ ಇದುವರೆವಿಗೆ ವೆಚ್ಚ ಮಾಡಿರುವ ಹಣವೆಷ್ಟು; ಬಾಕಿ ಉಳಿದಿರುವ ಹಣವೆಷ್ಟು; (ವರ್ಷವಾರು ಯೋಜನೆವಾರು ಸ್ಪಷ್ಟ ವಿವರ ನೀಡುವುದು)	1. ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಸ್ವಚ್ಛ ಭಾರತ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಐ.ಇ.ಸಿ ಮತ್ತು ಘನ ತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ. 2. ಕಳೆದ 3 ವರ್ಷಗಳಲ್ಲಿ ಬೀದರ್ ನಗರಸಭೆಗೆ ಎಸ್.ಎಫ್.ಸಿ ಮುಕ್ತನಿಧಿ/ ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಮಂಜೂರಾದ/ ಬಿಡುಗಡೆಯಾದ ಹಾಗೂ ವೆಚ್ಚವಾದ ಮತ್ತು ಬಾಕಿ ಉಳಿದ ಅನುದಾನದ ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಕಳೆದ 3 ವರ್ಷಗಳಲ್ಲಿ ಎಸ್.ಎಫ್.ಸಿ ಮುಕ್ತನಿಧಿ / ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಮಂಜೂರಾದ / ಬಿಡುಗಡೆಯಾದ ಹಾಗೂ ವೆಚ್ಚವಾದ ಮತ್ತು ಬಾಕಿ ಉಳಿದ ಅನುದಾನದ ವಿವರವನ್ನು ಸಂಬಂಧಿಸಿದಂತೆ ಮಾಹಿತಿಯನ್ನು ಸಿಡಿ ಮುಖಾಂತರ ಸಲ್ಲಿಸಿದೆ. 3. <u>14ನೇ ಹಣಕಾಸು ಮತ್ತು 15ನೇ ಹಣಕಾಸು ಆಯೋಗದ ಅನುದಾನ</u>: ಕಳೆದ ಮೂರು ವರ್ಷಗಳಲ್ಲಿ ಬೀದರ್ ನಗರಸಭೆಗೆ ಮಂಜೂರಾಗಿರುವ ಮತ್ತು ಬಿಡುಗಡೆಯಾಗಿರುವ ಅನುದಾನದ ವಿವರ, ವೆಚ್ಚದ ವಿವರಗಳು ಮತ್ತು ಬಾಕಿ ಉಳಿದಿರುವ ಮೊತ್ತದ ವಿವರ ಈ ಕೆಳಕಂಡಂತಿವೆ: (ರೂ. ಲಕ್ಷಗಳಲ್ಲಿ)

	ಅನುದಾನ	ಸಾಲು	ಹಂಚಿಕೆ ಯಾದ ಅನುದಾನ	ಬಿಡುಗಡೆ ಯಾದ ಅನುದಾನ	ವೆಚ್ಚವಾದ ಅನುದಾನ	ಬಾಕಿ ಉಳಿದಿರುವ ಅನುದಾನದ ಮೊತ್ತ
ಬೀದರ್ ನಗರಸಭೆ	14ನೇ ಹಣಕಾಸು ಆಯೋಗದ ಅನುದಾನ	2018-19	933.08	933.08	747.70	185.38
		2019-20	1253.72	1252.72	796.93	455.79

	15ನೇ ಹಣಕಾಸು ಆಯೋಗದ ಅನುದಾನ	2020-21	1265.00	1265	502.743	762.257

ಹಾಗೂ ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಕಳೆದ 3 ವರ್ಷಗಳಲ್ಲಿ ಮಂಜೂರಾಗಿ ಬಿಡುಗಡೆಯಾದ, ವೆಚ್ಚವಾದ ಮತ್ತು ಬಾಕಿ ಉಳಿದಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

ಅನುದಾನ	ಸಾಲು	ಹಂಚಿಕೆಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾದ ಅನುದಾನ	ಬಾಕಿ ಉಳಿದಿರುವ ಅನುದಾನದ ಮೊತ್ತ
14ನೇ ಹಣಕಾಸು ಆಯೋಗದ ಅನುದಾನ	2018-19	2218.99	2219.00	1550.19	668.81
	2019-20	2972.00	2973.70	1731.66	1242.04
15ನೇ ಹಣಕಾಸು ಆಯೋಗದ ಅನುದಾನ	2020-21	2923.00	2923.00	797.54	2125.46

4. ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ಬೀದರ್ ನಗರಸಭೆಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿರುವ, ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.

ಆ) ಸದರಿ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವ ಹಂತದಲ್ಲಿವೆ; ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ಒದಗಿಸುವುದು)

1. ಸ್ವಚ್ಛ ಭಾರತ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ.
2. ಕಳೆದ 3 ವರ್ಷಗಳಲ್ಲಿ ಬೀದರ್ ನಗರಸಭೆಗೆ ಎಸ್.ಎಫ್.ಸಿ ಮುಕ್ತನಿಧಿ/ ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಕಾಮಗಾರಿಗಳ ವಿವರಗಳನ್ನು **ಸಿಡಿಯಲ್ಲಿ** ಅಳವಡಿಸಿ ಸಲ್ಲಿಸಿದೆ.
3. **<u>14ನೇ ಹಣಕಾಸು ಆಯೋಗ ಅನುದಾನದಡಿ:</u>** ಬೀದರ್ ನಗರ ಸಭೆವತಿಯಿಂದ ಕೈಗೊಂಡ 105 ಕಾಮಗಾರಿಗಳಲ್ಲಿ 97 ಕಾಮಗಾರಿಗಳು ಪೂರ್ಣಗೊಂಡಿವೆ 8 ಕಾಮಗಾರಿಗಳು ಪ್ರಗತಿಯಲ್ಲಿವೆ.

<u>15ನೇ ಹಣಕಾಸು ಆಯೋಗದ ಅನುದಾನದಡಿ:</u> ಬೀದರ್ ನಗರಸಭೆ ವತಿಯಿಂದ ಕೈಗೊಂಡ 83 ಕಾಮಗಾರಿಗಳಲ್ಲಿ 52 ಕಾಮಗಾರಿಗಳು ಪೂರ್ಣಗೊಂಡಿವೆ 26 ಕಾಮಗಾರಿಗಳು ಪ್ರಗತಿಯಲ್ಲಿವೆ 5 ಕಾಮಗಾರಿಗಳಿಗೆ ಟೆಂಡರ್ ಕರೆಯಲು ಬಾಕಿ ಇದೆ.

ಬೀದರ್ ನಗರಸಭೆಯ ಕಾಮಗಾರಿಗಳ ವಿವರಗಳನ್ನು **ಅನುಬಂಧ-5** ಮತ್ತು **ಅನುಬಂಧ-6**ರಲ್ಲಿ ಲಗತ್ತಿಸಿದೆ.